# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1143** |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15-12-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಫಸಲ್ ಬಿಮಾ ಯೋಜನೆಯಡಿ ವಿಮೆಗೆ ನೋಂದಣಿಯಾಗಿರುವ ರೈತರ ಸಂಖ್ಯೆ ಎಷ್ಟು; ಬಾಕಿ ನೋಂದಣಿಯಾಗದಿರುವ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td><td>
ರಾಜ್ಯದಲ್ಲಿ, ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (KRS-PMFBY) ಯೋಜನೆಯಡಿ 22,51,801 ರೈತ ಪ್ರಕರಣಗಳು ಹಾಗೂ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ (R-WBCIS) ಬೆಳೆ ವಿಮೆ ಯೋಜನೆಯಡಿ 5,74,071 ರೈತ ಪ್ರಕರಣಗಳು ಬೆಳೆ ವಿಮೆಗೆ ನೋಂದಣಿಯಾಗಿರುತ್ತವೆ.
ಹಂಗಾಮುವಾರು, ಯೋಜನೆವಾರು ವಿಮೆಗೆ ನೋಂದಣಿಯಾಗಿರುವ ರೈತ ಪ್ರಕರಣಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ:
<table>
<tr><th>ವರ್ಷ/ ಹಂಗಾಮು</th><th>ಯೋಜನೆ</th><th>ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ</th></tr>
<tr><td rowspan="2">2023 ಮುಂಗಾರು</td><td>KRS-PMFBY</td><td>1914701</td></tr>
<tr><td>RWBCIS (ತೋಟಗಾರಿಕೆ)</td><td>572874</td></tr>
<tr><td colspan="2">2023 ಮುಂಗಾರು ಒಟ್ಟು</td><td>2487575</td></tr>
<tr><td rowspan="2">2023-24 ಹಿಂಗಾರು</td><td>KRS-PMFBY</td><td>ಇಲ್ಲಿಯವರೆಗೆ 337100 ರೈತರು ನೊಂದಣಿ ಮಾಡಿಕೊಂಡಿದ್ದು, ನೋಂದಣಿ ಕಾರ್ಯವು ಪ್ರಗತಿಯಲ್ಲಿರುತ್ತದೆ.</td></tr>
<tr><td>RWBCIS (ತೋಟಗಾರಿಕೆ)</td><td>1197</td></tr>
<tr><td colspan="2">2023-24 ಹಿಂಗಾರು ಒಟ್ಟು</td><td>338297</td></tr>
<tr><td colspan="2">ಒಟ್ಟು</td><td>2825872</td></tr>
</table>
ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.
ಬೆಳೆ ವಿಮೆ ಯೋಜನೆಯಡಿ ಸಾಲ ಪಡೆದ ಹಾಗೂ ಸಾಲ ಪಡೆಯದ ರೈತರು ಬೆಳೆ ವಿಮೆಗೆ ನೋಂದಾಯಿಸಲು ಐಚ್ಛಿಕವಾಗಿದ್ದು, ವಿಮೆಗೆ ನೋಂದಣಿ ಮಾಡಿಸಿಕೊಳ್ಳಲು ಇಚ್ಛಿಸುವ ರೈತರು ನೋಂದಣಿಯ ಅಂತಿಮ ದಿನಾಂಕದೊಳಗಾಗಿ ರೈತರ ಪಾಲಿನ ಪ್ರೀಮಿಯಂ ಮೊತ್ತವನ್ನು ಪಾವತಿಸಿ ನೋಂದಣಿ ಮಾಡಿಸಿಕೊಳ್ಳಬೇಕಾಗಿರುವುದರಿಂದ ಬಾಕಿ ನೋಂದಣಿಯಾಗದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.
</td></tr>
</table>

ಆ) ಫಸಲ್ ಬಿಮಾ ಯೋಜನೆಯಡಿ ವಿಮಾ ಸೌಲಭ್ಯಕ್ಕೆ ರಾಜ್ಯದಲ್ಲಿ ನೋಂದಣಿಯಾಗುತ್ತಿರುವ ರೈತರ ಸಂಖ್ಯೆ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;.

**ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (KRS-PMFBY)** ಯೋಜನೆಯಡಿ 2016-17ನೇ ಸಾಲಿನಿಂದ 2023-24ನೇ ಸಾಲಿನವರೆಗೆ ನೋಂದಣಿಯಾದ ರೈತ ಪ್ರಕರಣಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.

| ವರ್ಷ | ನೋಂದಣಿಯಾದ ರೈತ ಪ್ರಕರಣಗಳ ಸಂಖ್ಯೆ |
|---|---|
| 2016-17 | 3136688 |
| 2017-18 | 2056881 |
| 2018-19 | 2093995 |
| 2019-20 | 2101240 |
| 2020-21 | 1516014 |
| 2021-22 | 1577103 |
| 2022-23 | 2279613 |
| 2023-24* | 2251801 |
| **ಸರಾಸರಿ** | **2126667** |

*2023-24 ರ ಹಿಂಗಾರು ಹಂಗಾಮಿನ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಹಾಗೂ ಬೇಸಿಗೆ ಹಂಗಾಮಿನ ನೋಂದಣಿ ಪ್ರಕ್ರಿಯೆಯು ಜನವರಿ 2024 ರಿಂದ ಪ್ರಾರಂಭವಾಗುವುದು.

ಪ್ರತಿ ಸಾಲಿನಲ್ಲಿ ಹವಾಮಾನದ ಪರಿಸ್ಥಿತಿಯನ್ವಯ ಸರಾಸರಿ 21 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಸದರಿ ಯೋಜನೆಯಡಿ ಬೆಳೆ ವಿಮೆಗೆ ರೈತರ ನೋಂದಣಿ ಸಂಖ್ಯೆಯು ಅಷ್ಟೊಂದು ವ್ಯತ್ಯಾಸವಿರುವುದಿಲ್ಲ.

**ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ** (R-WBCIS) **ಯೋಜನೆಯಡಿ** ವಿಮಾ ಸೌಲಭ್ಯಕ್ಕೆ ರಾಜ್ಯದಲ್ಲಿ ನೋಂದಣಿಯಾಗುತ್ತಿರುವ ರೈತರ ಸಂಖ್ಯೆ ಇಳಿಮುಖವಾಗುತ್ತಿರುವುದಿಲ್ಲ ಬದಲಾಗಿ ಏರಿಕೆಯಾಗುತ್ತಿರುತ್ತದೆ. ಕಳೆದ 8 ವರ್ಷಗಳಲ್ಲಿ ರಾಜ್ಯದಲ್ಲಿ ನೋಂದಣಿಯಾಗುತ್ತಿರುವ ರೈತರ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.

| ವರ್ಷ | ನೊಂದಾಣಿಯಾದ ರೈತ ಪ್ರಕರಣಗಳ ಸಂಖ್ಯೆ |
|---|---|
| 2016-17 | 178796 |
| 2017-18 | 153859 |
| 2018-19 | 179229 |
| 2019-20 | 259584 |
| 2020-21 | 290825 |
| 2021-22 | 356823 |
| 2022-23 | 438788 |
| 2023-24 | 574071 |
| **ಒಟ್ಟು** | **2431975** |

## ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1143 ಕ್ಕೆ ಅನುಬಂಧ

**2023-24 ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಜಿಲ್ಲಾವಾರು ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆಯ ವಿವರ**

| ಕ್ರ. ಸಂ | ಜಿಲ್ಲೆ | KRS-PMFBY | | RWBCIS | | KRS-PMFBY+RWBCIS | | |
|---|---|---|---|---|---|---|---|---|
| | | ಮುಂಗಾರು ಹಂಗಾಮಿಗೆ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಹಿಂಗಾರು ಹಂಗಾಮಿನಲ್ಲಿ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಮುಂಗಾರು ಹಂಗಾಮಿಗೆ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಹಿಂಗಾರು ಹಂಗಾಮಿನಲ್ಲಿ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಒಟ್ಟು ಮುಂಗಾರು ಹಂಗಾಮಿಗೆ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಒಟ್ಟು ಹಿಂಗಾರು ಹಂಗಾಮಿನಲ್ಲಿ ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಒಟ್ಟು ರೈತ ಪ್ರಕರಣಗಳ ಸಂಖ್ಯೆ |
| 1 | ಬಾಗಲಕೋಟೆ | 12313 | 7876 | 5505 | 0 | 17818 | 7876 | 25694 |
| 2 | ಬಳ್ಳಾರಿ | 4757 | 1349 | 60 | 0 | 4817 | 1349 | 6166 |
| 3 | ಬೆಳಗಾವಿ | 40377 | 12461 | 9482 | 56 | 49859 | 12517 | 62376 |
| 4 | ಬೆಂಗಳೂರು ಗ್ರಾಮಾಂತರ | 25595 | 0 | 715 | 0 | 26310 | 0 | 26310 |
| 5 | ಬೆಂಗಳೂರು ನಗರ | 1190 | 0 | 110 | 0 | 1300 | 0 | 1300 |
| 6 | ಬೀದರ್ | 256385 | 5723 | 500 | 7 | 256885 | 5730 | 262615 |
| 7 | ಚಾಮರಾಜನಗರ | 16732 | 1480 | 19 | 0 | 16751 | 1480 | 18231 |
| 8 | ಚಿಕ್ಕಬಳ್ಳಾಪುರ | 49214 | 81 | 2806 | 0 | 52020 | 81 | 52101 |
| 9 | ಚಿಕ್ಕಮಗಳೂರು | 6707 | 244 | 39010 | 0 | 45717 | 244 | 45961 |
| 10 | ಚಿತ್ರದುರ್ಗ | 100991 | 2040 | 5004 | 0 | 105995 | 2040 | 108035 |
| 11 | ದಕ್ಷಿಣ ಕನ್ನಡ | 402 | 0 | 228621 | 0 | 229023 | 0 | 229023 |
| 12 | ದಾವಣಗೆರೆ | 47092 | 1688 | 7880 | 0 | 54972 | 1688 | 56660 |
| 13 | ಧಾರವಾಡ | 111056 | 31133 | 10768 | 0 | 121824 | 31133 | 152957 |
| 14 | ಗದಗ | 111696 | 74430 | 118 | 0 | 111814 | 74430 | 186244 |
| 15 | ಹಾಸನ | 80533 | 25933 | 13496 | 0 | 94029 | 25933 | 119962 |
| 16 | ಹಾವೇರಿ | 315715 | 76444 | 23658 | 0 | 339373 | 76444 | 415817 |
| 17 | ಕಲಬುರಗಿ | 162072 | 6333 | 358 | 0 | 162430 | 6333 | 168763 |
| 18 | ಕೊಡಗು | 213 | 0 | 2247 | 0 | 2460 | 0 | 2460 |
| 19 | ಕೋಲಾರ | 11345 | 8168 | 4709 | 0 | 16054 | 8168 | 24222 |
| 20 | ಕೊಪ್ಪಳ | 74781 | 27230 | 1450 | 1134 | 76231 | 28364 | 104595 |
| 21 | ಮಂಡ್ಯ | 87104 | 13206 | 14 | 0 | 87118 | 13206 | 100324 |
| 22 | ಮೈಸೂರು | 3642 | 2327 | 7 | 0 | 3649 | 2327 | 5976 |
| 23 | ರಾಯಚೂರು | 52452 | 20873 | 752 | 0 | 53204 | 20873 | 74077 |
| 24 | ರಾಮನಗರ | 7259 | 3229 | 11949 | 0 | 19208 | 3229 | 22437 |
| 25 | ಶಿವಮೊಗ್ಗ | 41147 | 174 | 73264 | 0 | 114411 | 174 | 114585 |
| 26 | ತುಮಕೂರು | 102620 | 1292 | 16590 | 0 | 119210 | 1292 | 120502 |
| 27 | ಉಡುಪಿ | 1458 | 0 | 10377 | 0 | 11835 | 0 | 11835 |
| 28 | ಉತ್ತರ ಕನ್ನಡ | 51118 | 2 | 81676 | 0 | 132794 | 2 | 132796 |
| 29 | ವಿಜಯನಗರ | 9603 | 2976 | 624 | 0 | 10227 | 2976 | 13203 |
| 30 | ವಿಜಯಪುರ | 35838 | 10327 | 20949 | 0 | 56787 | 10327 | 67114 |
| 31 | ಯಾದಗಿರಿ | 93294 | 81 | 156 | 0 | 93450 | 81 | 93531 |
| | **ಒಟ್ಟು** | **1914701** | **337100** | **572874** | **1197** | **2487575** | **338297** | **2825872** |

| | | |
|---|---|---|
| ೩) | ಬಂದಿದ್ದಲ್ಲಿ, ವಿಮೆ ಸೌಲಭ್ಯವನ್ನು ರಾಜ್ಯದ ಎಲ್ಲಾ ರೈತರಿಗೆ ತಲುಪಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? | **ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ** ಸೌಲಭ್ಯವನ್ನು ರಾಜ್ಯದ ಎಲ್ಲಾ ರೈತರಿಗೆ ತಲುಪಿಸಲು, ಸರ್ಕಾರವು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು, ಭಿತ್ತಿಪತ್ರಗಳು ಕರಪತ್ರಗಳ ಮತ್ತು ತರಬೇತಿಗಳನ್ನು ನೀಡುವ ಮುಖೇನ, ಸಮೂಹ ಮಾಧ್ಯಮಗಳ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲಾಗತ್ತಿದೆ ಹಾಗೂ ವಿಮಾ ಸಂಸ್ಥೆಗಳಿಂದಲೂ ಸಹ ಸಮೂಹ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗತ್ತಿದೆ.<br><br>ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜ್ಯ, ಜಿಲ್ಲಾ ಮಟ್ಟಗಳಲ್ಲಿಯೂ ಸಹ ಎಲ್ಲಾ ಹಂಗಾಮಿನ ಪ್ರಾರಂಭದಲ್ಲಿ ಬೆಳೆ ವಿಮೆ ಯೋಜನೆಯ ಪರಿಚಯ ಮತ್ತು ನೋಂದಣಿ ಕುರಿತು ಮಾಹಿತಿಯನ್ನು ನೀಡಲಾಗುತ್ತಿದೆ.<br><br>2021-22 ನೇ ಸಾಲಿನಿಂದ ಪ್ರತಿ ವರ್ಷ,ಪ್ರತಿ ಹಂಗಾಮು ಪ್ರಾರಂಭದಲ್ಲಿ "Crop Insurance Week" ಎಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಪಾಲುದಾರರ ಸಹಯೋಗದಲ್ಲಿ ಬೆಳೆ ವಿಮೆ ನೋಂದಣಿ ಕುರಿತು "Van Campaign" (ಭಿತ್ತಿಪತ್ರಗಳು, ಕರಪತ್ರಗಳು ಮತ್ತು ಬ್ಯಾನರ್) ವಿತರಣೆ ಮಾಡುವ ಮೂಲಕ ರೈತರಿಗೆ ವ್ಯಾಪಕವಾಗಿ ಅರಿವು ಮೂಡಿಸಲಾಗುತ್ತಿದೆ.<br><br>ರೈತರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಮತ್ತಷ್ಟು ಉತ್ತೇಜಿಸಲು ***"ನನ್ನ ಪಾಲಿಸಿ ನನ್ನ ಕೈಯಲ್ಲಿ"*** ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಇದರ ಅಡಿಯಲ್ಲಿ ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿಕೊಂಡ ರೈತರ ಮನೆ ಬಾಗಿಲಿಗೆ ವಿಮಾ ಸಂಸ್ಥೆಯ ಪ್ರತಿನಿಧಿಗಳಿಂದ ಪಾಲಿಸಿಯನ್ನು ವಿತರಣೆ ಮಾಡುವ ಮೂಲಕ ಕ್ಲೈಮ್ ಪ್ರಕ್ರಿಯೆ, ಕುಂದುಕೊರತೆ ಪರಿಹಾರದ ಬಗ್ಗೆ ಮತ್ತು ಮುಂಬರುವ ಹಂಗಾಮಿನಲ್ಲಿ ಬೆಳೆ ವಿಮೆ ನೋಂದಣಿಗಾಗಿ ಪ್ರೋತ್ಸಾಹ ನೀಡಲಾಗುತ್ತಿದೆ.<br><br>**ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ** ವಿಮಾ ಸೌಲಭ್ಯಕ್ಕೆ ರಾಜ್ಯದಲ್ಲಿ ನೋಂದಣಿಯಾಗುತ್ತಿರುವ ರೈತರ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಿರುತ್ತದೆ. ವಿಮೆ ಸೌಲಭ್ಯವನ್ನು ರಾಜ್ಯದ ಎಲ್ಲಾ ಅರ್ಹ ಹಾಗೂ ಆಸಕ್ತ ರೈತರಿಗೆ ತಲುಪಿಸಲು ಇಲಾಖೆ ಹಾಗೂ ವಿಮೆ ಕಂಪೆನಿಗಳ ಮೂಲಕ ಪ್ರಚಾರ ಪಡಿಸಲಾಗುತ್ತಿರುತ್ತದೆ. |

***ಸಂಖ್ಯೆ: ಕೃಇ 120 ಎಎಂಎಸ್ 2023***

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ 1143 ಕ್ಕೆ ಪೂರಕ ಟಿಪ್ಪಣಿ**

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, 2016-17ನೇ ಸಾಲಿನ ಮುಂಗಾರು ಹಂಗಾಮಿನಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಅತ್ಯಂತ ವೈಜ್ಞಾನಿಕವಾಗಿ ಅಂದರೆ ಅರ್ಜಿ ಸಲ್ಲಿಸುವುದರಿಂದ ಬೆಳೆ ಕಟಾವು ಪ್ರಯೋಗ ಹಾಗೂ ವಿಮಾ ಪರಿಹಾರ ಮೊತ್ತ ಅರ್ಹ ರೈತರ ಖಾತೆಗೆ ಜಮೆಯಾಗುವವರೆಗೆ ಪ್ರತಿಯೊಂದನ್ನು ಸಂರಕ್ಷಣೆ ತಂತ್ರಾಂಶದ ಮುಖಾಂತರ ಮಾಡಲಾಗುತ್ತಿದೆ.

ಮುಂಗಾರು ಹಂಗಾಮಿನಲ್ಲಿ ರಾಜ್ಯದ 31 ಜಿಲ್ಲೆಗಳಲ್ಲಿ ವಿಮಾ ಘಟಕವಾರು ವಿವಿಧ ಬೆಳೆಗಳನ್ನು ಬೆಳೆ ವಿಮೆ ನೋಂದಣಿಗಾಗಿ ಅಧಿಸೂಚಿಸಲಾಗುತ್ತದೆ. ಹಿಂಗಾರು ಹಂಗಾಮಿನಲ್ಲಿ ಬೆಳೆ ಆವರಿಸಿದ ವಿಸ್ತೀರ್ಣಕ್ಕನುಗುಣವಾಗಿ ಕೊಡಗು, ದಕ್ಷಿಣ ಕನ್ನಡ, ಬೆಂಗಳೂರು, ಬೆಂಗಳೂರು ಗ್ರಾಮಾಂತರ 04 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 27 ಜಿಲ್ಲೆಗಳಲ್ಲಿ ಹಾಗೂ ಬೇಸಿಗೆ ಹಂಗಾಮಿನಲ್ಲಿ ಉಡುಪಿ, ಕೊಡಗು, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ಬೀದರ್ 05 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 26 ಜಿಲ್ಲೆಗಳಲ್ಲಿ ಬೆಳೆ ವಿಮೆ ನೋಂದಣಿಗಾಗಿ ಅಧಿಸೂಚಿಸಲಾಗುತ್ತದೆ.

2016-17 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಪ್ರಸಕ್ತ ಹಂಗಾಮಿಗಾಗಿ ಬೆಳೆ ಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುತ್ತಿತ್ತು ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿತ್ತು. ಆದರೆ, 2020 ನೇ ಸಾಲಿನಿಂದ Revamped PMFBY ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರು ಬೆಳೆವಿಮೆಯಡಿ ಒಳಪಡುವುದು ಐಚ್ಛಿಕವಾಗಿರುತ್ತದೆ. ಸದರಿ ರೈತರು ಬ್ಯಾಂಕ್ ಗಳಲ್ಲಿ ಬೆಳೆ ಸಾಲ ಪಡೆಯುವ ಸಂದರ್ಭದಲ್ಲಿ ಅವರ ಬೆಳೆಯನ್ನು ವಿಮೆಯಿಂದ ಕೈಬಿಡಲು ಘೋಷಣಾ ಪತ್ರವನ್ನು ನೀಡಿದ್ದಲ್ಲಿ ವಿಮಾ ಯೋಜನೆಯಿಂದ ಕೈಬಿಡಲಾಗುವುದು.

ಈ ಯೋಜನೆಯಡಿ ಇಚ್ಛೆಯುಳ್ಳ ಬೆಳೆ ಸಾಲ ಪಡೆದ/ಪಡೆಯದ ರೈತರು ಯೋಜನೆಯಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಜಿಲ್ಲಾವಾರು ಹಾಗೂ ಬೆಳೆವಾರು ಅಧಿಸೂಚಿಸಿದ ಕೊನೆಯ ದಿನಾಂಕದೊಳಗೆ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ ಕಂದಾಯ ರಶೀದಿ / ಖಾತೆ ಪುಸ್ತಕ / ಪಾಸ್ ಪುಸ್ತಕ ಮತ್ತು ಆಧಾರ್ ಸಂಖ್ಯೆಯನ್ನು ಒದಗಿಸುವ ಮೂಲಕ ಆರ್ಥಿಕ ಸಂಸ್ಥೆಗಳಾದ ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ (Common Service Centers), ಕರ್ನಾಟಕ ಒನ್, ಬೆಂಗಳೂರು ಒನ್

ಮತ್ತು ಗ್ರಾಮ ಒನ್ ಗಳಲ್ಲಿ ಸಂರಕ್ಷಣೆ ತಂತ್ರಾಂಶದ ಮುಖಾಂತರ ರೈತರ ಪಾಲಿನ ಪ್ರೀಮಿಯಂ ಮೊತ್ತವನ್ನು ಪಾವತಿಸಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬಹುದು.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು 2016 ಮುಂಗಾರು ಹಂಗಾಮಿನಿಂದ ರಾಜ್ಯದಲ್ಲಿ ಆರಂಭಗೊಂಡಿದ್ದು, ಸದರಿ ಯೋಜನೆಯಡಿ 2016-17ನೇ ಸಾಲಿನಿಂದ 2022-23 ಸಾಲಿನವರೆಗೆ ಒಟ್ಟು 147.61 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸಿರುತ್ತಾರೆ.

**2016-17 ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಜಿಲ್ಲಾವಾರು ನೊಂದಾಯಿಸಿದ ರೈತರ ಸಂಖ್ಯೆ**

| ಕ್ರ. ಸಂ | ಜಿಲ್ಲೆ | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|---|---|
| 1 | ಬಾಗಲಕೋಟೆ | 237178 | 45119 | 157223 | 89654 | 32471 | 24536 | 35111 | 20189 |
| 2 | ಬಳ್ಳಾರಿ | 79329 | 35262 | 31559 | 40407 | 19283 | 17212 | 5354 | 6106 |
| 3 | ಬೆಳಗಾವಿ | 393184 | 46703 | 99359 | 65474 | 34398 | 39010 | 46841 | 52838 |
| 4 | ಬೆಂಗಳೂರು ಗ್ರಾ. | 1480 | 9757 | 3928 | 4584 | 1104 | 1371 | 4872 | 25595 |
| 5 | ಬೆಂಗಳೂರು ನಗರ | 740 | 895 | 713 | 1102 | 195 | 188 | 788 | 1190 |
| 6 | ಬೀದರ್ | 360138 | 322030 | 221852 | 279556 | 214685 | 254064 | 360339 | 262108 |
| 7 | ಚಾಮರಾಜನಗರ | 77760 | 60542 | 44008 | 36613 | 16683 | 16522 | 14036 | 18212 |
| 8 | ಚಿಕ್ಕಬಳ್ಳಾಪುರ | 9095 | 47106 | 25519 | 16138 | 27208 | 10691 | 38288 | 49295 |
| 9 | ಚಿಕ್ಕಮಗಳೂರು | 24205 | 9874 | 10633 | 15500 | 3813 | 3258 | 10732 | 6951 |
| 10 | ಚಿತ್ರದುರ್ಗ | 24571 | 99821 | 64121 | 104269 | 103957 | 76867 | 111955 | 103031 |
| 11 | ದಕ್ಷಿಣ ಕನ್ನಡ | 886 | 313 | 647 | 844 | 582 | 438 | 510 | 402 |
| 12 | ದಾವಣಗೆರೆ | 39097 | 110371 | 18749 | 40365 | 18156 | 20359 | 39984 | 48780 |
| 13 | ಧಾರವಾಡ | 296348 | 179895 | 204058 | 226842 | 129248 | 188788 | 184668 | 142189 |
| 14 | ಗದಗ | 265172 | 113844 | 231830 | 243240 | 191531 | 178838 | 190948 | 186126 |
| 15 | ಹಾಸನ | 44820 | 74832 | 66996 | 18325 | 37304 | 27868 | 131874 | 106466 |
| 16 | ಹಾವೇರಿ | 165012 | 210108 | 120470 | 148157 | 140666 | 170188 | 243430 | 392159 |
| 17 | ಕಲಬುರಗಿ | 173820 | 90420 | 69161 | 38248 | 37145 | 66234 | 193869 | 168405 |
| 18 | ಕೊಡಗು | 4247 | 2835 | 1115 | 689 | 759 | 166 | 151 | 213 |
| 19 | ಕೋಲಾರ | 31660 | 41407 | 26022 | 24986 | 5152 | 6890 | 8772 | 19513 |
| 20 | ಕೊಪ್ಪಳ | 130661 | 96781 | 117742 | 105311 | 122467 | 104651 | 111055 | 102011 |
| 21 | ಮಂಡ್ಯ | 98531 | 43420 | 43265 | 37553 | 4652 | 12904 | 38061 | 100310 |
| 22 | ಮೈಸೂರು | 64734 | 5830 | 4457 | 14452 | 3159 | 12483 | 8031 | 5969 |
| 23 | ರಾಯಚೂರು | 137298 | 22947 | 123097 | 149157 | 71656 | 59506 | 87123 | 73325 |
| 24 | ರಾಮನಗರ | 10312 | 25997 | 2665 | 6769 | 1127 | 2218 | 6326 | 10488 |
| 25 | ಶಿವಮೊಗ್ಗ | 28069 | 42091 | 23330 | 35495 | 20565 | 20205 | 31604 | 41321 |
| 26 | ತುಮಕೂರು | 36944 | 114289 | 96158 | 128830 | 86163 | 76405 | 127828 | 103912 |

| | | | | | | | | | |
|---|---|---|---|---|---|---|---|---|---|
| 27 | ಉಡುಪಿ | 4597 | 2630 | 4289 | 3974 | 2399 | 1342 | 2098 | 1458 |
| 28 | ಉತ್ತರ ಕನ್ನಡ | 80689 | 86571 | 91128 | 95365 | 84182 | 75826 | 68459 | 51120 |
| 29 | ವಿಜಯನಗರ | 0 | 0 | 0 | 0 | 0 | 0 | 22762 | 12579 |
| 30 | ವಿಜಯಪುರ | 222776 | 85648 | 155727 | 106760 | 93483 | 97053 | 138090 | 46165 |
| 31 | ಯಾದಗಿರಿ | 93335 | 29543 | 34174 | 22581 | 11821 | 11022 | 15654 | 93375 |
| | **ಒಟ್ಟು** | **3136688** | **2056881** | **2093995** | **2101240** | **1516014** | **1577103** | **2279613** | **2251801** |

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಪ್ರಸ್ತುತ ಚಾಲನೆಯಲ್ಲಿರುವ 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 19.14 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸಿರುತ್ತಾರೆ. ಹಿಂಗಾರು 2023 ರ ಹಂಗಾಮಿನಲ್ಲಿ ಇಲ್ಲಿಯವರೆಗೆ 3.37 ಲಕ್ಷ ರೈತರು ನೊಂದಣಿ ಮಾಡಿಕೊಂಡಿದ್ದು, ನೋಂದಣಿ ಕಾರ್ಯವು ಪ್ರಗತಿಯಲ್ಲಿರುತ್ತದೆ. 2023-24 ಬೇಸಿಗೆ ಹಂಗಾಮಿಗೆ ನೋಂದಣಿ ಕಾರ್ಯವು ಜನವರಿ 2024 ರಿಂದ ಪ್ರಾರಂಭವಾಗುವುದು.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಬೆಳೆ ವಿಮೆ ಯೋಜನೆಯಡಿ ಪ್ರತಿ ಸಾಲಿನಲ್ಲಿ ಹವಾಮಾನದ ಪರಿಸ್ಥಿತಿಯನ್ವಯ ಸರಾಸರಿ 21 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸುತ್ತಿದ್ದಾರೆ. ಯೋಜನೆಯಡಿ ನೋಂದಣಿಯಲ್ಲಿ ವರ್ಷದಿಂದ ವರ್ಷಕ್ಕೆ ಇಳಿಮುಖವಾಗಿರುವುದು ಕಂಡುಬಂದಿರುವುದಿಲ್ಲ.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯ ಸೌಲಭ್ಯವನ್ನು ರಾಜ್ಯದ ಎಲ್ಲಾ ರೈತರಿಗೆ ತಲುಪಿಸಲು ಸರ್ಕಾರವು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು, ಭಿತ್ತಿಪತ್ರಗಳು ಕರಪತ್ರಗಳ ಮತ್ತು ತರಬೇತಿಗಳನ್ನು ನೀಡುವ ಮುಖೇನ, ಸಮೂಹ ಮಾದ್ಯಮಗಳ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲಾಗತ್ತಿದೆ ಹಾಗೂ ವಿಮಾ ಸಂಸ್ಥೆಗಳಿಂದಲೂ ಸಹ ಸಮೂಹ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗತ್ತಿದೆ.

ಅಲ್ಲದೇ, ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜ್ಯ, ಜಿಲ್ಲಾ ಮಟ್ಟಗಳಲ್ಲಿಯೂ ಸಹ ಎಲ್ಲಾ ಹಂಗಾಮಿನ ಪ್ರಾರಂಭದಲ್ಲಿ ಬೆಳೆ ವಿಮೆ ಯೋಜನೆಯ ಪರಿಚಯ ಮತ್ತು ನೋಂದಣಿ ಕುರಿತು ಮಾಹಿತಿಯನ್ನು ನೀಡಲಾಗುತ್ತಿದೆ.

2021-22 ನೇ ಸಾಲಿನಿಂದ ಪ್ರತಿ ವರ್ಷ, ಪ್ರತಿ ಹಂಗಾಮು ಪ್ರಾರಂಭದಲ್ಲಿ "Crop Insurance Week" ಎಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಪಾಲುದಾರರ ಸಹಯೋಗದಲ್ಲಿ ಬೆಳೆ ವಿಮೆ ನೋಂದಣಿ ಕುರಿತು "Van Campaign" (ಭಿತ್ತಿಪತ್ರಗಳು, ಕರಪತ್ರಗಳು ಮತ್ತು ಬ್ಯಾನರ್) ವಿತರಣೆ ಮಾಡುವ ಮೂಲಕ ರೈತರಿಗೆ ವ್ಯಾಪಕವಾಗಿ ಅರಿವು ಮೂಡಿಸಲಾಗುತ್ತಿದೆ.

ರೈತರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಮತ್ತಷ್ಟು ಉತ್ತೇಜಿಸಲು 'ನನ್ನ ಪಾಲಿಸಿ ನನ್ನ ಕೈಯಲ್ಲಿ' ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಇದರ


ಅಡಿಯಲ್ಲಿ ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿಕೊಂಡ ರೈತರ ಮನೆ ಬಾಗಿಲಿಗೆ ವಿಮಾ ಸಂಸ್ಥೆಯ ಪ್ರತಿನಿಧಿಗಳಿಂದ ಪಾಲಿಸಿಯನ್ನು ವಿತರಣೆ ಮಾಡುವ ಮೂಲಕ ಕ್ಲೈಮ್ ಪ್ರಕ್ರಿಯೆ, ಕುಂದುಕೊರತೆ ಪರಿಹಾರದ ಬಗ್ಗೆ ಮತ್ತು ಮುಂಬರುವ ಹಂಗಾಮಿನಲ್ಲಿ ಬೆಳೆ ವಿಮೆ ನೋಂದಣಿಗಾಗಿ ಪ್ರೋತ್ಸಾಹ ನೀಡಲಾಗುತ್ತಿದೆ.

**ವಿಮಾ ಸಂಸ್ಥೆಗಳಿಂದ ಕೈಗೊಂಡ ಮಾಹಿತಿ ,ಶಿಕ್ಷಣ ಮತ್ತು ಚಟುವಟಿಕೆಗಳ (IEC Activities) ವಿವರ**


| ವಿಮಾ ಸಂಸ್ಥಗಳು | ವ್ಯಾನ್ ಕ್ಯಾಂಪೇನ್ | "ನನ್ನ ಪಾಲಿಸಿ ನನ್ನ ಕೈಯಲ್ಲಿ" ಅಭಿಯಾನ | ಪಾಠಶಾಲಾ | ಜಿಲ್ಲೆಗಳಲ್ಲಿ ಸ್ಥಾಪಿಸಲಾದ ಸಿಮೆಂಟ್ ಬೆಂಚ್ ಗಳ ಸಂಖ್ಯೆ | ಗೋಡೆ ಬರಹ | ರೈತರಿಗೆ ಪ್ರಚಾರ ಮಾಡಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕರಪತ್ರಗಳ ವಿತರಣೆ (ಬ್ಯಾನರ್, ಬಿತ್ತಿ ಚಿತ್ರ,ಕರಪತ್ರ,ಜಾಹಿರಾತು ನಿಲುವುಗಳು) |
|---|---|---|---|---|---|---|
| ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿ (AIC) | 15 | 73450 | 5019 | 25 | 0 | 370833 |
| ಫ್ಯೂಚರ್ ಜನರಲಿ ಇನ್ಸುರೆನ್ಸ್ ಕಂಪನಿ (FGIC) | 0 | 4210 | 173 | 10 | 0 | 208522 |
| ರಿಲಾಯನ್ಸ್ ಜನರಲಿ ಇನ್ಸುರೆನ್ಸ್ ಕಂಪನಿ(Reliance) | 0 | 2066 | 69 | 10 | 0 | 129968 |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜನರಲಿ ಇನ್ಸುರೆನ್ಸ್ ಕಂಪನಿ(SBIGIC) | 437 | 47808 | 881 | 21 | 48 | 353800 |
| ಬಜಾಜ್ ಅಲಿಯನ್ಸ್ ಜನರಲ್ ಇನ್ಸುರೆನ್ಸ್ ಕಂಪನಿ | 0 | 890 | 228 | 10 | 0 | 11680 |
| ಯೂನಿವರ್ಸಲ್ ಸೋಂಪೋ ಜನರಲ್ ಇನ್ಸುರೆನ್ಸ್ ಕಂಪನಿ (USGIC) | 1253 | 134674 | 886 | 15 | 0 | 951556 |
| ಒಟ್ಟು | **1705** | **263098** | **7256** | **91** | **48** | **2026359** |


**ವ್ಯಾನ್ ಕ್ಯಾಂಪೇನ್ ಮೂಲಕ ರೈತರಿಗೆ ಪ್ರಚಾರ ಮಾಡುತ್ತಿರುವ ಚಿತ್ರಣ**






<u>ರೈತರಿಗೆ ಫಸಲ್ ಪಾಠಶಾಲಾ ತರಬೇತಿ ಕಾರ್ಯಕ್ರಮ ಕೈಗೊಂಡಿರುವ ದೃಶ್ಯ</u>







"ನನ್ನ ಪಾಲಿಸಿ ನನ್ನ ಕೈಯಲ್ಲಿ" ಅಭಿಯಾನದಡಿ ರೈತರಿಗೆ ಪಾಲಿಸಿ ವಿತರಿಸುತ್ತಿರುವುದು



ರೈತರಿಗೆ ಪ್ರಚಾರ ಮಾಡಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕರಪತ್ರಗಳ ವಿತರಣೆ



ಜಿಲ್ಲೆಗಳಲ್ಲಿ ವಿವಿದೆಡೆ ಸಿಮೆಂಟ್ ಬೆಂಚ್ ಗಳು ಸ್ಥಾಪಿಸುವ ಮೂಲಕ ಪ್ರಚಾರ ಕೈಗೊಂಡಿರುವುದು



**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ.1143 ಕ್ಕೆ ಪೂರಕ ಟಿಪ್ಪಣಿ**

*****

ಮುಂಗಾರು 2016 ರಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ತೋಟಗಾರಿಕೆ ಇಲಾಖೆಯಿಂದ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು (RWBCIS) ಅನುಷ್ಠಾನಗೊಳಿಸಲಾಗುತ್ತಿರುತ್ತದೆ. ಈ ಯೋಜನೆಯಡಿ ನೊಂದಾಯಿಸುವುದು ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿದ್ದು, 2020ನೇ ಸಾಲಿನಿಂದ **Revamped PMFBY** ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ಸಾಲ ಪಡೆದ ರೈತರಿಗೂ ಐಚ್ಛಿಕವಾಗಿರುತ್ತದೆ. ಸದರಿ ರೈತರು ಬ್ಯಾಂಕ್ ಗಳಲ್ಲಿ ಬೆಳೆ ಸಾಲ ಪಡೆಯುವ ಸಂದರ್ಭದಲ್ಲಿ ಅವರ ಬೆಳೆಯನ್ನು ವಿಮೆಯಿಂದ ಕೈಬಿಡಲು ಘೋಷಣಾ ಪತ್ರವನ್ನು ನೀಡಿದ್ದಲ್ಲಿ ವಿಮಾ ಯೋಜನೆಯಿಂದ ಕೈಬಿಡಲಾಗುವುದು. ವಿಮೆಗೆ ನೋಂದಣಿಮಾಡಿಸಿಕೊಳ್ಳಲು ಇಚ್ಛಿಸುವ ರೈತರು ನೋಂದಣಿಯ ಅಂತಿಮ ದಿನಾಂಕದೊಳಗೆ ನೋಂದಣಿ ಮಾಡಿಸಿಕೊಳ್ಳಬೇಕಾಗಿರುತ್ತದೆ. 2023-24ನೇ ಸಾಲಿಗೆ ರಾಜ್ಯದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಟ್ಟಾರೆ 5,74,071 ರೈತ ಪ್ರಕರಣಗಳಲ್ಲಿ ವಿಮೆಗೆ ನೋಂದಣಿಯಾಗಿರುತ್ತದೆ.

ರಾಜ್ಯದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ವಿಮಾ ಸೌಲಭ್ಯಕ್ಕೆ ನೋಂದಣಿಯಾಗುತ್ತಿರುವ ರೈತರ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಿರುತ್ತದೆ. ಕಳೆದ 8 ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟಾರೆ **24,31,975** ರೈತ ಪ್ರಕರಣಗಳು ವಿಮೆಗೆ ನೋಂದಣಿಯಾಗಿರುತ್ತದೆ.

ವಿಮೆ ಸೌಲಭ್ಯವನ್ನು ರಾಜ್ಯದ ಎಲ್ಲಾ ಅರ್ಹ ಹಾಗು ಆಸಕ್ತ ರೈತರಿಗೆ ತಲುಪಿಸಲು ಇಲಾಖೆ ಹಾಗು ವಿಮೆ ಕಂಪೆನಿಗಳಿಂದ ಕೈಪಿಡಿ, ಮುದ್ರಣ, ಭಿತ್ತಿ ಪತ್ರ, ಮಾದ್ಯಮ, ಕರ ಪತ್ರಗಳ ಮೂಲಕ ಪ್ರಚುರ ಪಡಿಸಿ ವಿಮೆ ಸೌಲಭ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿರುತ್ತದೆ.

ಕರಡು ತೋಟಗಾರಿಕೆ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ

**ತೋಟಗಾರಿಕೆ ಜಂಟಿ ನಿರ್ದೇಶಕರು**
**ತೋ-ಇ-ಆಡಳಿತ, ಯೋಜನಾ ನಿರ್ವಹಣಾ ಘಟಕ,**
**ಲಾಲ್ ಬಾಗ್, ಬೆಂಗಳೂರು.**